ಗಿರಿಜನರಿಗೆ ಸೌಲಭ್ಯಗಳು

ಳ್ಳಿ, ಶ್ರೀಮತಿ ಸುಮಾ ವಸಂತ (ವೀರಾಜಪೇಟೆ).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗಿರಿಜನ ಯೋಜನೆಯ ವಿವಿಧ ಕಾರ್ಯ ಘಟಕಗಳಿಗೆ ಬೇರೆ ಬೇರೆಯಾಗಿ ಮಂಜೂರಾದ ಹಣವೆಷ್ಟು (ವರ್ಷಂಪ್ರತಿ ೧೯೮೫ರಿಂದ ೧೯೮೭ರವರೆಗೆ) ?

ಆ) ಪ್ರತಿ ವರ್ಷ ಈ ಯೋಜನೆಯಲ್ಲಿ ಉಪಯೋಗ ಪಡೆದ ಫಲಾನುಭವಿಗಳ ತಾಲ್ಲೂಕುವಾರು ಸಂಖ್ಯೆ ಎಷ್ಟು ?

ಇ) ಜಮೀನು, ಮನೆ, ಸ್ವಂತ ಜಾಗ ಇರದ ಹಾಗೂ ಕೂಲಿಯನ್ನೇ ಅವಲಂಬಿಸಿರುವ ಗಿರಿಜನರಿಗೆ ಈವರೆವಿಗೆ ವಿರಾಜಪೇಟೆಯಲ್ಲಿ ಯಾವ ತರಹದ ಸೌಲಭ್ಯಗಳನ್ನು ಈ ಯೋಜನೆಯಲ್ಲಿ ಕೊಡಲಾಗಿದೆ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು),—

ಅ) ಮಂಜೂರಾದ ಹಣ — ರೂ. ಲಕ್ಷಗಳಲ್ಲಿ

೧೯೮೫-೮೬	—	೫೫೩.೮೫
೧೯೮೬-೮೭		೧೧೫೭.೦೮

(ಕಾರ್ಯಕ್ರಮವಾರು ಬಿಡುಗಡೆಯಾದ ಹಣವನ್ನು ಅನುಬಂಧ-೧ರಲ್ಲಿ ನಮೂದಿಸಿದೆ.)

ಆ)

	ತಾಲ್ಲೂಕು	ಫಲಾನುಭವಿಗಳ ಸಂಖ್ಯೆ	
	ಮೈಸೂರು ಜಿಲ್ಲೆ	೧೯೮೫-೮೬	೧೯೮೬-೮೭
೧.	ಮೈಸೂರು	೧೬	೫೨
೨.	ಕೊಳ್ಳೇಗಾಲ	೨೯೫	೫೮೨
೩.	ನಂಜನಗೂಡು	೭೫	೧೮೯
೪.	ಚಾಮರಾಜನಗರ	೨೨೫	೫೬೭
೫.	ಗುಂಡ್ಲುಪೇಟೆ	೯೨	೨೬೧
೬.	ಯಳಂದೂರು	೧೮೬	೧೬೨
೭.	ಹೆಚ್. ಡಿ. ಕೋಟೆ	೩೮೩	೫೮೬
೮.	ಪುಣಸೂರು	೬೦೫	೬೫೧
೯.	ಪಿರಿಯಾಪಟ್ಟಣ	೩೦೫	೪೯೬
	ಒಟ್ಟು	೨೧೮೨	೩೫೪೬

ಚಿಕ್ಕಮಗಳೂರು ಜಿಲ್ಲೆ

೧.	ಮೂಡಿಗೆರೆ	೧೯೦	೧೭೬
೨.	ಕೊಪ್ಪ	೧೬೫	೧೪೧
೩.	ಶೃಂಗೇರಿ	೬೮	೭೪
೪.	ನರಸಿಂಹರಾಜಪುರ	೨೬	೫೫
೫.	ಚಿಕ್ಕಮಗಳೂರು	೯	೪೦
	ಒಟ್ಟು	೪೫೮	೪೮೬

ಕೊಡಗು ಜಿಲ್ಲೆ

೧.	ಮಡಿಕೇರಿ	೮೮	೭೩
೨.	ಸೋಮವಾರಪೇಟೆ	೧೮೫	೧೪೧
೩.	ವೀರಾಜಪೇಟೆ	೧೫೧	೧೨೪
	ಒಟ್ಟು	೪೨೪	೩೩೮

ದಕ್ಷಿಣ ಕನ್ನಡ ಜಿಲ್ಲೆ

೧.	ಕುಂದಾಪುರ	೨೨೨	೬೩
೨.	ಉಡುಪಿ	೨೬೫	೧೦೨
೩.	ಕಾರ್ಕಳ	೩೦೧	೫೫
೪.	ಬೆಳ್ತಂಗಡಿ	೨೦೦	೫೫
೫.	ಮಂಗಳೂರು	೧೩೮	೩೮
೬.	ಬಂಟವಾಳ	೧೯೫	೭೯
೭.	ಪುತ್ತೂರು	೧೬೩	೭೩
೮.	ಸುಳ್ಯ	೧೬೯	೫೪
	ಒಟ್ಟು	೧೬೫೩	೫೧೯

೪) ಕೆಳಕಂಡ ಸೌಲಭ್ಯಗಳನ್ನು ವೀರಾಜಪೇಟೆಯ ಗಿರಿಜನರಿಗೆ ಒದಗಿಸಲಾಗಿದೆ :-

೧. ಹಾಲು ಕರೆಯುವ ಹಸುಗಳ ಪೂರೈಕೆ.
೨. ಕೃಷಿ ಉಪಕರಣಗಳು,
೩. ಎಮ್ಮೆಗಳ ಪೂರೈಸುವಿಕೆ.
೪. ಹಂದಿ ಸಾಕಾಣಿಕೆ.

೫. ಸಾಮಾಜಿಕ ಅರಣ್ಯ ಯೋಜನೆ.
೬. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ.
೭. ಜನತಾ ಮನೆಗಳ ನಿರ್ಮಾಣ.
೮. ಬಿದರಿನ ಕೈಗಾರಿಕೆ.
೯. ಮೀನುಗಾರಿಕೆಯಲ್ಲಿ ತರಬೇತಿ.
೧೦. ಸ್ವಯಂ ಉದ್ಯೋಗಕ್ಕಾಗಿ ತರಬೇತಿ.
೧೧. ವಿವಿಧ ಸಂಘ ಸಂಸ್ಥೆಗಳಲ್ಲಿ ಸದಸ್ಯರಾಗಲು ಸಹಾಯ ಧನ.
೧೨. ಆರೋಗ್ಯ ಘಟಕಗಳ ಸ್ಥಾಪನೆ.
೧೩. ಪೌಷ್ಠಿಕ ಆಹಾರ ಸರಬರಾಜು.
೧೪. ಕುಡಿಯುವ ನೀರಿನ ಬಾವಿಗಳು.

ಅನುಬಂಧ—೧

(ರೂ. ಲಕ್ಷಗಳಲ್ಲಿ)

ಕ್ರಮ	ಇಲಾಖೆ	ಮಂಜೂರಾದ ಹಣ	
		೧೯೮೫-೮೬ ರೂ.	೧೯೮೬-೮೭ ರೂ.
೧.	ಕೃಷಿ ಇಲಾಖೆ	೬೫.೩೬	೬೫.೩೦
೨.	ಭೂ ಸಂರಕ್ಷಣಾ ಇಲಾಖೆ	೧೦.೦೦	೪೩.೨೦
೩.	ತೋಟಗಾರಿಕೆ ಇಲಾಖೆ	೧೩.೦೦	೧೯.೮೦
೪.	ಪಶುಸಂಗೋಪನಾ ಇಲಾಖೆ	೧೩.೦೬	೭.೭೨
೫.	ಮೀನುಗಾರಿಕೆ ಇಲಾಖೆ	೪.೩೫	೫.೦೦
೬.	ಸಣ್ಣ ನೀರಾವರಿ ಇಲಾಖೆ	೯.೮೦	೯.೦೦
೭.	ಸಹಕಾರ ಇಲಾಖೆ	೪೦.೨೩	೫೧.೭೫
೮.	ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ	೧೫.೦೦	೩೨೦.೫೦
೯.	ಅರಣ್ಯ ಇಲಾಖೆ	೩೦.೦೦	೩೮.೨೦
೧೦.	ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ	೨೧.೦೦	೧೬೨.೫೦
೧೧.	ರೇಷ್ಮೆ ಇಲಾಖೆ	೫೮.೦೦	೨೨.೪೩
೧೨.	ಲೋಕೋಪಯೋಗಿ ಇಲಾಖೆ	೨೮.೫೦	೩೯.೦೦
೧೩.	ಆರೋಗ್ಯ ಮತ್ತು ಕುಟುಂಬ ಕಲ್ಯಾಣ	೧೫.೦೦	೩೩.೦೨
೧೪.	ಗೃಹ ಇಲಾಖೆ	೪೦.೦೫	೪೫.೦೦
೧೫.	ಸಾರ್ವಜನಿಕ ಆರೋಗ್ಯ ಶಿಲ್ಪ ಇಲಾಖೆ	೩೩.೦೦	೨೩.೩೫
೧೬.	ಉದ್ಯೋಗ ಮತ್ತು ತರಬೇತಿ ಇಲಾಖೆ	೫.೦೦	೬.೯೦

೧	೨	೩	೪	೫
೧೬.	ವಾರ್ತಾ ಮತ್ತು ಪ್ರಚಾರ ಇಲಾಖೆ	೧.೦೦		೧.೦೦
೧೮.	ಸಮಾಜ ಕಲ್ಯಾಣ ಇಲಾಖೆ	೬.೭೫		೭೬.೮೦
೧೯.	ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ	೨೨.೦೦		೩.೮೭
೨೦.	ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ	೫.೦೦		೫.೦೦
೨೧.	ಆದಿವಾಸಿ ಜನಾಂಗದವರಿಗಾಗಿ	೨೦.೭೫		೩೫.೫೪
೨೨.	ಪ್ರಾದೇಶಿಕ ಅಭಿವೃದ್ಧಿ ಕಾರ್ಯಕ್ರಮ	೩೦.೦೦		೧೦೮.೦೦
೨೩.	ಕರ್ನಾಟಕ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ	೪೭.೮೦		೧೧.೧೩
೨೪.	ನೀರಾವರಿ ಕೊಳವೆ ಬಾವಿಗಳು	೨೦.೦೦		೨೩.೮೭
	ಒಟ್ಟು	೫೫೩.೮೫		೧೧೫೭.೦೮

ರಾಜ್ಯದ ಜನತೆಯನ್ನು ಧಿಕ್ಕರಿಸಿ ಸಮಿತಿಗಳಿಗೆ ನೇಮಿಸಿರುವ ಬಗ್ಗೆ

೨೧೭. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ಧಾರ್ಮಿಕ ಮತ್ತು ಮುಜರಾಯಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಅರ್ಹ ವ್ಯಕ್ತಿಗಳಿದ್ದು ಸಹ ಅವರಿಗೆ ಪ್ರಾತಿನಿಧ್ಯ ಕೊಡದೆ ಶ್ರವಣಬೆಳಗೊಳ ದಿಗಂಬರ ಜೈನ ಮುಜರಾಯಿ ಸಂಸ್ಥೆ, ಚನ್ನರಾಯಪಟ್ಟಣದ ಆಡಳಿತ ಮಂಡಳಿಗೆ ಸದಸ್ಯರಾಗಿ ನೇಮಿಸುವಂತೆ ಮಾನ್ಯ ಮುಖ್ಯಮಂತ್ರಿಗಳು ಹೊರ ರಾಜ್ಯದ ವ್ಯಕ್ತಿಯ ಹೆಸರನ್ನು ಮಾನ್ಯ ಮುಖ್ಯಮಂತ್ರಿಗಳು ಹೊರರಾಜ್ಯದ ವ್ಯಕ್ತಿಯ ಹೆಸರನ್ನು ಮಾನ್ಯ ಧಾರ್ಮಿಕ ಮತ್ತು ಮುಜರಾಯಿ ಮಂತ್ರಿಗಳಿಗೆ ಸೂಚಿಸಿದ್ದು ನಿಜವೆ ?

ಆ) ಹಾಗಿದ್ದಲ್ಲಿ ಅಂತಹ ಸೂಚನೆಯನ್ನು ಸರ್ಕಾರದ ಮುಜರಾಯಿ ಇಲಾಖೆಯ ಸಮಿತಿಯ ಅಧ್ಯಕ್ಷರಾದ ಸ್ವಾಮೀಜಿಯವರಿಗೆ ಕಳುಹಿಸಿದ್ದು ಸಹ ನಿಜವೆ ?

ಇ) ಸ್ವಾಮೀಜಿಯು ಸಹ ಮುಖ್ಯಮಂತ್ರಿಗಳ ಸೂಚನೆಯನ್ನು ಅನುಮೋದಿಸಿದರೆ ರಾಜ್ಯದ ಜನತೆಗೆ ಅನ್ಯಾಯ ಮಾಡಿದಂತಾಗುವುದಿಲ್ಲವೆ ?

ಶ್ರೀ ಕೆ. ಅಪ್ಪಾಜಿನಾಥಶೆಟ್ಟಿ (ಧಾರ್ಮಿಕ ಮತ್ತು ದತ್ತಿ ರಾಜ್ಯ ಮಂತ್ರಿಗಳು).—

ಅ) ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಕಂದಾಯ ಆಯುಕ್ತರಿಗೆ ಪರಿಶೀಲಿಸಲು ಟಿಪ್ಪಣಿಯನ್ನು ಕಳುಹಿಸಿರುತ್ತಾರೆ. ಆದರೆ ನಿಯಮಿಸಬೇಕೆಂದು ಸೂಚನೆ ಕೊಟ್ಟಿರುವುದಿಲ್ಲ.

ಆ) ಶ್ರವಣಬೆಳಗೊಳ ದಿಗಂಬರ ಜೈನ್ ಮುಜರಾಯಿ ಸಮಿತಿಯ ನಿಯಮಾವಳಿಗಳ ಪ್ರಕಾರ ಇದನ್ನು ಪರಿಶೀಲಿಸಿ ಅಭಿಪ್ರಾಯ ಸೂಚಿಸಲು ಶ್ರೀ ಸ್ವಾಮೀಜಿಯವರಿಗೆ ಕಳಿಸಲಾಗಿತ್ತು.

ಇ) ನಿಯಮಾವಳಿಗಳ ಪ್ರಕಾರ ಸಮಿತಿಗೆ ಸದಸ್ಯರನ್ನು ನೇಮಕ ಮಾಡುತ್ತಿರುವುದರಿಂದ ರಾಜ್ಯದ ಜನತೆಗೆ ಅನ್ಯಾಯವಾಗುವ ಪ್ರಶ್ನೆ ಉದ್ಭವಿಸುವುದಿಲ್ಲ.